# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುರ್ತು ಕುಡಿಯುವ ನೀರಿನ ಪೂರೈಕೆಗಾಗಿ NRDWP ಟಾಸ್ಕ್‌ಫೋರ್ಸ್ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. ಕಂದಾಯ ಇಲಾಖೆ ಆದೇಶ ಸಂ.ಕಂಇ/186/ಟಿಎನ್‌ಆರ್/2018, ದಿನಾಂಕ 25-09-2018
2. ಆರ್ಥಿಕ ಇಲಾಖೆ ಸಹಮತಿ ಸಂ:ಆಇ 420 ವೆಚ್ಚ-6 2018 ದಿನಾಂಕ:06-10-2018.
3. ಸರ್ಕಾರದ ಆದೇಶ ಸಂ:ಗ್ರಾಅಪ/33/ಗ್ರಾನೀಸ(3)/2018, ಬೆಂಗಳೂರು, ದಿನಾಂಕ 27-08-2018.

****

**ಪ್ರಸ್ತಾವನೆ**

ರಾಜ್ಯದಲ್ಲಿ 2018-19ನೇ ಸಾಲಿಗೆ ಮುಂಗಾರು ಹಂಗಾಮಿನಲ್ಲಿ 86 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಘೋಷಿಸಲಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿರುತ್ತದೆ. ತುರ್ತು ಕುಡಿಯುವ ನೀರನ್ನು ಪೂರೈಸಲು ಉಲ್ಲೇಖ(2)ರಲ್ಲಿ ಆರ್ಥಿಕ ಇಲಾಖೆ NRDWP/RWS ಉಳಿಕೆ ಅನುದಾನದಲ್ಲಿ ಪ್ರತಿ ತಾಲ್ಲೂಕುಗಳಿಗೆ ತಲಾ ರೂ.50.00ಲಕ್ಷಗಳಂತೆ ಒಟ್ಟು ರೂ.4300.00ಲಕ್ಷಗಳನ್ನು ಬಿಡುಗಡೆಗೆ ಸಹಮತಿಸಿರುತ್ತದೆ.

ಉಲ್ಲೇಖ (3)ರ ಸರ್ಕಾರದ ಆದೇಶದಲ್ಲಿ ಲೆಕ್ಕ ಶೀರ್ಷಿಕೆ:2215-01-102-9-08-132 ಅಡಿ ರೂ.14700.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಬಿಡುಗಡೆಯಾದ ಅನುದಾನದಲ್ಲಿ ಪ್ರಸ್ತುತ ರೂ.2150.00ಲಕ್ಷಗಳ ಅನುದಾನವನ್ನು ಸಮಸ್ಯಾತ್ಮಕ ಗ್ರಾಮಗಳಲ್ಲಿ ತುರ್ತಾಗಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಅಗತ್ಯವಿರುವ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯದ 23 ಜಿಲ್ಲೆಗಳ 86 ತಾಲ್ಲೂಕುಗಳಿಗೆ ತಲಾ ರೂ.25.00ಲಕ್ಷಗಳಂತೆ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 42 ಗ್ರಾನೀಸ(3)2018 ಬೆಂಗಳೂರು, ದಿನಾಂಕ: 15.10.2018**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತುರ್ತು ಕುಡಿಯುವ ನೀರು ಪೂರೈಸಲು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ರಾಜ್ಯದ 23 ಜಿಲ್ಲೆಗಳ 86 ತಾಲ್ಲೂಕುಗಳಿಗೆ ತಲಾ ರೂ.25.00ಲಕ್ಷಗಳಂತೆ ಅನುದಾನ ಲೆಕ್ಕ ಶೀರ್ಷಿಕೆ:2215-01-102-9-08-132 ಅಡಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವಿವೇಚನಾ ನಿಧಿಗೆ ತಾಲ್ಲೂಕುವಾರು ಒಟ್ಟು ರೂ.2150.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ:2215-01-102-9-08 ಅಡಿ Payees Receipt ಮೇಲೆ ಖಜಾನೆಯಿಂದ ತೆಗೆದು ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ:04462010091577ಗೆ ರಾಜ್ಯದ ಪಾಲಾಗಿ ಜಮೆ ಮಾಡಲಾಗಿದೆ.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವು ಕೆಳಕಂಡ ನಿಬಂಧನೆಗೊಳಪಟ್ಟಿರುತ್ತದೆ:

I. ಎಲ್ಲಿ ನೈಜವಾಗಿ ಕುಡಿಯುವ ನೀರಿನ ಸಮಸ್ಯೆ ಇದೆಯೋ ಅಂತಹ ಕಡೆಗಳಲ್ಲಿ ಮಾತ್ರ ಅಗತ್ಯ ಪುನಃಶ್ಚೇತನ ಅಂದರೆ – ಕೊಳವೆ ಬಾವಿಗಳನ್ನು ಕೊರೆಯಿಸುವುದು, ಸ್ವಚ್ಛಗೊಳಿಸುವುದು, ಹೈಡ್ರೋಫ್ರಾಕ್ಚರಿಂಗ್‌ಗೊಳಿಸುವುದು, ಪಂಪ್ ಫ್ಲಶಿಂಗ್, ಮೋಟರ್ ಅಳವಡಿಸುವುದು, ಪೈಪ್‌ಲೈನ್ ವಿಸ್ತರಣೆ, ವಿದ್ಯುತ್ ಸಂಪರ್ಕದಂತಹ ಸಣ್ಣ ಪ್ರಮಾಣದ ಕಾಮಗಾರಿಗಳನ್ನು ಸದ್ಯಢ ನೀರಿನ ಬವಣೆಗಳನ್ನು ನೀಗಿಸಲು ಮಾತ್ರ ಅನುಷ್ಠಾನಗೊಳಿಸತಕ್ಕದ್ದು, ಹಾಗೂ ಖಾಸಗಿ ಬೋರ್‌ವೆಲ್‌ಗಳ ಸೇವೆ ಪಡೆಯುವಂತಹ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

II. ತೀವ್ರ ಅನಿವಾರ್ಯವಿದ್ದಲ್ಲಿ ಮಾತ್ರ ಭೂವಿಜ್ಞಾನಿಗಳ ಸಲಹೆ ಮೇರೆಗೆ ಹೊಸ ಬೋರ್‌ವೆಲ್‌ಗಳನ್ನು ಕೊರೆಸಿ ಸದರಿ ಬೋರ್‌ವೆಲ್‌ಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುವಂತೆ ನೋಡಿಕೊಳ್ಳತಕ್ಕದ್ದು.

III. ಹೊಸ ಕೊಳವೆ ಬಾವಿಗಳನ್ನು ಕೊರೆಯುವ ಮುನ್ನ ಅದರ ಸ್ಥಳ ಮತ್ತು ಗುರುತಿಗಾಗಿ ಜಿ.ಪಿ.ಎಸ್. ಸಿಸ್ಟಂ ಮುಖೇನ ಅಧಿಕೃತ ದಾಖಲೆ ಮಾಡುವುದರೊಂದಿಗೆ ಅದರ ಛಾಯಾಚಿತ್ರವನ್ನು ಕಾಮಗಾರಿಗೆ ಮುನ್ನ ಹಾಗೂ ನಂತರ ತೆಗೆದು ಗಾಂಧಿ ಸಾಕ್ಷಿ ಕಾಯಕದಲ್ಲಿ ದಾಖಲಿಸುವುದು. ಸಂಬಂಧಪಟ್ಟ ಸ್ಥಳೀಯ ಹಿರಿಯ ಅಧಿಕಾರಿ ಈ ಪ್ರಕ್ರಿಯೆಯನ್ನು ದೃಢೀಕರಿಸತಕ್ಕದ್ದು.

IV. ಈ ಆದೇಶದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ ಕಾಮಾಗಾರಿಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಘಟನೋತ್ತರ ಮಂಜೂರಾತಿಯನ್ನು ಪಡೆದುಕೊಳ್ಳಬೇಕಾಗಿರುತ್ತದೆ.

V. ಕ್ರಿಯಾ ಯೋಜನೆಯನ್ನು ಆಯಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸತಕ್ಕದ್ದು. ಈಗ ಒದಗಿಸಿರುವ ಅನುದಾನದ ಮಿತಿಯೊಳಗೆ ತುರ್ತು ಕಾಮಗಾರಿಗಳನ್ನು ಸ್ಥಳೀಯ ಆಗತ್ಯತೆ ಆಧರಿಸಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯ ಮುಖೇನ ಅನುಷ್ಠಾನಗೊಳಿಸಬೇಕು.

4. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಉಪಯೋಗಿಸುವಾಗ ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ಪಿಡಬ್ಲ್ಯೂಡಿ "ಎ" ಕೋಡ್ ಮತ್ತು "ಡಿ" ಕೋಡ್ ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ಸುತ್ತೋಲೆ, ಆದೇಶ ಹಾಗೂ ನಿಯಮಗಳು / ಕಾಯ್ದೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

5. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣಕ್ಕೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

6. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು RTGS ಮುಖೇನ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ಘೋಷಿಸಿರುವ ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 04462010091577 ಮುಖಾಂತರ ವಿನಿಯೋಗಿಸತಕ್ಕದ್ದು.

7. ಈ ಆದೇಶದಲ್ಲಿ ಬಿಡುಗಡೆಯಾದ ರಾಜ್ಯ ವಲಯದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215–01–102–9–08 – 132 ಸಾಮಾನ್ಯ ಅಡಿ ಗಣನೆಗೆ ತೆಗೆದುಕೊಂಡು, ಆರ್.ಟಿ.ಜಿ.ಎಸ್. ಮುಖೇನ ಅನುಬಂಧದಲ್ಲಿ ತೋರಿಸಿರುವಂತೆ ಜಿಲ್ಲಾ ಪಂಚಾಯತ್‌ಗಳು ಕಳುಹಿಸುವ ಬಿಲ್ಲುಗಳನ್ನು ಬ್ಯಾಂಕ್‌ನವರು ಮಾನ್ಯ ಮಾಡಿ ಪಾವತಿಸತಕ್ಕದ್ದು.

8. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನದ ಹಣಬಳಕೆ ಪ್ರಮಾಣ ಪತ್ರವನ್ನು ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆರವರಿಗೆ ಆಯಾ ಜಿಲ್ಲಾ ಪಂಚಾಯತ್ / ವಿಭಾಗಗಳವರು ಕಡ್ಡಾಯವಾಗಿ ಕಳುಹಿಸಿಕೊಡತಕ್ಕದ್ದು.

9. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಯಾವ ಉದ್ದೇಶಗಳಿಗೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಗಳಿಗೆ ಬಳಸಿಕೊಳ್ಳತಕ್ಕದ್ದು.

10. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ:ಆಇ/420/ವೆಚ್ಚ-6/2018, ದಿನಾಂಕ:06–10–2018 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಉಪ ಕಾರ್ಯದರ್ಶಿ (ಪ್ರಭಾರ)
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1) ಕರ್ನಾಟಕ, ಬೆಂಗಳೂರು.
3. ~~ಮಹಾಲೇಖಪಾಲರು (ಎಯು–2) ಕರ್ನಾಟಕ, ಬೆಂಗಳೂರು.~~
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ / ವಿಕಾಸಸೌಧ ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
9. ಬೆಂಗಳೂರು. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು–09
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕಾವೇರಿಭವನ, ಬೆಂಗಳೂರು–09.
12. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು (ಗ್ರಾ), ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರ್ಗಿ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ, ರಾಯಚೂರು, ರಾಮನಗರ, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳು.

13. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಬೆಂಗಳೂರು (ಗ್ರಾ), ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರ್ಗಿ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ, ರಾಯಚೂರು, ರಾಮನಗರ, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳು.
14. ಸಂಬಂಧಿಸಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಅಧೀಕ್ಷಕ ಅಭಿಯಂತರರು.
15. ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟೆ, ಬೆಂಗಳೂರು (ಗ್ರಾ), ಬೆಳಗಾವಿ, ಬಳ್ಳಾರಿ, ಬೀದರ್, ವಿಜಯಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರ್ಗಿ, ಹಾಸನ, ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ, ರಾಯಚೂರು, ರಾಮನಗರ, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳು.
16. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
18. ಆಯುಕ್ತರು, RDWSD / ಆಂತರಿಕ ಆರ್ಥಿಕ ಸಲಹೆಗಾರರು / ಇವರುಗಳ ಆಪ್ತ ಸಹಾಯಕರು.
19. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದ್ದೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
22. ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈರ್ಮಲ್ಯ ಉಪ ವಿಭಾಗಗಳು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 42 ಗ್ರಾನೀಸ(3)2018 ಬೆಂಗಳೂರು, ದಿನಾಂಕ: 15.10.2018ರ ಲಗತ್ತು

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ 2018-19ನೇ ಸಾಲಿಗೆ ರಾಜ್ಯ ವಲಯದ ಟಾಸ್ಕ್‌ಫೋರ್ಸ್ ಘಟಕದಡಿ ಬಿಡುಗಡೆ ಮಾಡಲಾದ ಅನುದಾನ.

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ತಾಲ್ಲೂಕು ಸಂಖ್ಯೆ | ತಾಲ್ಲೂಕು | ಹಂಚಿಕೆ ಮಾಡಬಹುದಾದ |
|---|---|---|---|---|
| 1 | ಬಾಗಲಕೋಟೆ | 1 | ಬಾದಾಮಿ | 25.00 |
| | | 2 | ಬಾಗಲಕೋಟೆ | 25.00 |
| | | 3 | ಹುನಗುಂದ | 25.00 |
| | | 4 | ಜಮಕಂಡಿ | 25.00 |
| | | | ಒಟ್ಟು | **100.00** |
| 2 | ಬೆಂಗಳೂರು (ಗ್ರಾ) | 5 | ಹೊಸಕೋಟೆ | 25.00 |
| | | | ಒಟ್ಟು | **25.00** |
| 3 | ಬೆಳಗಾವಿ | 6 | ರಾಮದುರ್ಗ | 25.00 |
| | | 7 | ಸೌವದತ್ತಿ | 25.00 |
| | | | ಒಟ್ಟು | **50.00** |
| 4 | ಬಳ್ಳಾರಿ | 8 | ಬಳ್ಳಾರಿ | 25.00 |
| | | 9 | ಹೂವಿನಹಡಗಲಿ | 25.00 |
| | | 10 | ಹೊಸಪೇಟೆ | 25.00 |
| | | 11 | ಹಗರಿಬೊಮ್ಮನಹಳ್ಳಿ | 25.00 |
| | | 12 | ಕೂಡ್ಲಗಿ | 25.00 |
| | | 13 | ಸಂಡೂರು | 25.00 |
| | | 14 | ಸಿರಗುಪ್ಪ | 25.00 |
| | | | ಒಟ್ಟು | **175.00** |
| 5 | ಬೀದರ್ | 15 | ಬೀದರ್ | 25.00 |
| | | 16 | ಹುಮನಾಬಾದ್ | 25.00 |
| | | | ಒಟ್ಟು | **50.00** |
| 6 | ವಿಜಯಪುರ | 17 | ಬಸವನಬಾಗೇವಾಡಿ | 25.00 |
| | | 18 | ವಿಜಯಪುರ | 25.00 |
| | | 19 | ಇಂಡಿ | 25.00 |
| | | 20 | ಮುದ್ದೆಬಿಹಾಳ | 25.00 |
| | | 21 | ಸಿಂಧಗಿ | 25.00 |
| | | | ಒಟ್ಟು | **125.00** |
| 7 | ಚಾಮರಾಜನಗರ | 22 | ಕೊಳ್ಳೆಗಾಲ | 25.00 |
| | | 23 | ಯಳಂದೂರು | 25.00 |
| | | | ಒಟ್ಟು | **50.00** |
| 8 | ಚಿಕ್ಕಬಳ್ಳಾಪುರ | 24 | ಬಾಗೇಪಲ್ಲಿ | 25.00 |
| | | 25 | ಚಿಕ್ಕಬಳ್ಳಾಪುರ | 25.00 |
| | | 26 | ಚಿಂತಾಮಣಿ | 25.00 |
| | | 27 | ಗೌರಿಬಿದನೂರು | 25.00 |
| | | 28 | ಗುಡಿಬಂಡೆ | 25.00 |
| | | 29 | ಶಿಡ್ಲಘಟ್ಟ | 25.00 |
| | | | ಒಟ್ಟು | 150.00 |

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ತಾಲ್ಲೂಕು ಸಂಖ್ಯೆ | ತಾಲ್ಲೂಕು | ಹಂಚಿಕೆ ಮಾಡಬಹುದಾದ |
|---|---|---|---|---|
| 9 | ಚಿಕ್ಕಮಗಳೂರು | 30 | ಕಡೂರು | 25.00 |
| | | | ಒಟ್ಟು | **25.00** |
| 10 | ಚಿತ್ರದುರ್ಗ | 31 | ಚಳ್ಳಕೆರೆ | 25.00 |
| | | 32 | ಚಿತ್ರದುರ್ಗ | 25.00 |
| | | 33 | ಹಿರಿಯೂರು | 25.00 |
| | | 34 | ಮೊಳಕಾಲ್ಮೂರು | 25.00 |
| | | | ಒಟ್ಟು | **100.00** |
| 11 | ದಾವಣಗೆರೆ | 35 | ಹರಪನಹಳ್ಳಿ | 25.00 |
| | | 36 | ಹರಿಹರ | 25.00 |
| | | | ಒಟ್ಟು | **50.00** |
| 12 | ಧಾರವಾಡ | 37 | ಹುಬ್ಬಳ್ಳಿ | 25.00 |
| | | 38 | ನವಲಗುಂದ | 25.00 |
| | | | ಒಟ್ಟು | **50.00** |
| 13 | ಗದಗ | 39 | ಗದಗ | 25.00 |
| | | 40 | ಮುಂಡರಗಿ | 25.00 |
| | | 41 | ನರಗುಂದ | 25.00 |
| | | 42 | ರೋಣ | 25.00 |
| | | 43 | ಶಿರಹಟ್ಟಿ | 25.00 |
| | | | ಒಟ್ಟು | **125.00** |
| 14 | ಕಲಬುರ್ಗಿ | 44 | ಅಫಜಲ್‌ಪುರ | 25.00 |
| | | 45 | ಚಿಂಚೋಳಿ | 25.00 |
| | | 46 | ಚಿತ್ತಾಪುರ | 25.00 |
| | | 47 | ಕಲಬುರ್ಗಿ | 25.00 |
| | | 48 | ಜೇವರ್ಗಿ | 25.00 |
| | | 49 | ಸೇಡಂ | 25.00 |
| | | | ಒಟ್ಟು | **150.00** |
| 15 | ಹಾಸನ | 50 | ಅರಸೀಕೆರೆ | 25.00 |
| | | 51 | ಬೇಲೂರು | 25.00 |
| | | 52 | ಚನ್ನರಾಯಪಟ್ಟಣ | 25.00 |
| | | | ಒಟ್ಟು | **75.00** |
| 16 | ಹಾವೇರಿ | 53 | ರಾಣೆಬೆನ್ನೂರು | 25.00 |
| | | | ಒಟ್ಟು | **25.00** |
| 17 | ಕೋಲಾರ | 54 | ಬಂಗಾರಪೇಟೆ | 25.00 |
| | | 55 | ಕೋಲಾರ | 25.00 |
| | | 56 | ಮಾಲೂರು | 25.00 |
| | | 57 | ಮುಳಬಾಗಿಲು | 25.00 |
| | | 58 | ಶ್ರೀನಿವಾಸಪುರ | 25.00 |
| | | | ಒಟ್ಟು | **125.00** |
| 18 | ಕೊಪ್ಪಳ | 59 | ಗಂಗಾವತಿ | 25.00 |
| | | 60 | ಕೊಪ್ಪಳ | 25.00 |
| | | 61 | ಕುಷ್ಟಗಿ | 25.00 |
| | | 62 | ಯಲಬುರ್ಗ | 25.00 |
| | | | ಒಟ್ಟು | 100.00 |

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ತಾಲ್ಲೂಕು ಸಂಖ್ಯೆ | ತಾಲ್ಲೂಕು | ಹಂಚಿಕೆ ಮಾಡಬಹುದಾದ |
|---|---|---|---|---|
| 19 | ಮಂಡ್ಯ | 63 | ಮದ್ದೂರು | 25.00 |
| | | 64 | ಮಳವಳ್ಳಿ | 25.00 |
| | | 65 | ಮಂಡ್ಯ | 25.00 |
| | | 66 | ನಾಗಮಂಗಲ | 25.00 |
| | | 67 | ಶ್ರೀರಂಗಪಟ್ಟಣ | 25.00 |
| | | | ಒಟ್ಟು | **125.00** |
| 20 | ರಾಯಚೂರು | 68 | ದೇವದುರ್ಗ | 25.00 |
| | | 69 | ಲಿಂಗಸುಗೂರು | 25.00 |
| | | 70 | ಮಾನ್ವಿ | 25.00 |
| | | 71 | ರಾಯಚೂರು | 25.00 |
| | | 72 | ಸಿಂಧನೂರು | 25.00 |
| | | | ಒಟ್ಟು | **125.00** |
| 21 | ರಾಮನಗರ | 73 | ಚನ್ನಪಟ್ಟಣ | 25.00 |
| | | 74 | ಕನಕಪುರ | 25.00 |
| | | | ಒಟ್ಟು | **50.00** |
| 22 | ತುಮಕೂರು | 75 | ಚಿಕ್ಕನಾಯಕನಹಳ್ಳಿ | 25.00 |
| | | 76 | ಗುಬ್ಬಿ | 25.00 |
| | | 77 | ಕೊರಟಗೆರೆ | 25.00 |
| | | 78 | ಕುಣಿಗಲ್ | 25.00 |
| | | 79 | ಮಧುಗಿರಿ | 25.00 |
| | | 80 | ಪಾವಗಡ | 25.00 |
| | | 81 | ಶಿರಾ | 25.00 |
| | | 82 | ತಿಪಟೂರು | 25.00 |
| | | 83 | ತುಮಕೂರು | 25.00 |
| | | | ಒಟ್ಟು | **225.00** |
| 23 | ಯಾದಗಿರಿ | 84 | ಶಹಾಪುರ | 25.00 |
| | | 85 | ಶೋರಾಪುರ | 25.00 |
| | | 86 | ಯಾದಗಿರಿ | 25.00 |
| | | | ಒಟ್ಟು | **75.00** |
| | | | ಒಟ್ಟಾರೆ | **2150.00** |

ಸರ್ಕಾರದ ಉಪ ಕಾರ್ಯದರ್ಶಿ (ಪ್ರಭಾರ)
ಗ್ರಾ. ಕು. ನೀ. &. ನೈ. ಇಲಾಖೆ